<u>ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು</u>

**ಸಿ.ಸಿ.ನಂಃ 334/2022**

ಸಿಡಬ್ಲ್ಯು ಃ 3    ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನರಸಿಂಹಮೂರ್ತಿ |
| ತಂದೆಯ ಹೆಸರು | ಃ | ಅಕುಲಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಖಾಸಗಿ |
| ಸ್ಥಳ | ಃ | ಹೊಸೂರು |

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ ಃ 26.05.2025.

**ಮುಖ್ಯ ವಿಚಾರಣೆ ಮಾನ್ಯ ಃ ಶ್ರೀ.ಎಪಿಪಿಯವರಿಂದ ಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ.

ಸಾಕ್ಷಿಯು ಸ್ಥಳ ಮಹಜರ್ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸ್ಥಳ ಮಹಜರ್ ಅನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಹಾಗೂ ನಿಪಿ-1 ಬಿ ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ನಾನು ಹಾಗೂ ದೇವರಾಜ್ ರವರು ಬೈಕ್ ನಲ್ಲಿ ಹೋಗುತ್ತಿದ್ದಾಗ ಪೋಲೀಸರು ನಮ್ಮನ್ನು ಕರೆದು ಒಂದು ದಾಖಲಾತಿಗೆ ಸಹಿ ಮಾಡಲು ಹೇಳಿದರು. ನಾವು ಪೋಲೀಸರ ಹೇಳಿಕೆಯಂತೆ ಸದರಿ ದಾಖಲಾತಿಗೆ ಪೋಲೀಸ್ ಠಾಣೆಗೆ ಹೋಗುವ ದಾರಿಯಲ್ಲಿ ಸಹಿ ಮಾಡಿದೆವು. ನಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಯಾವ ವಿಚಾರವಾಗಿ ಸದರಿ ದಾಖಲಾತಿಯ ಮೇಲೆ ಸಹಿ ಮಾಡಿದ್ದೇನೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ಘಟನೆ ಸಂಬಂಧವಾಗಿ ಯಾರ ಮುಂದೆಯೂ ನಾನು ಹೇಳಿಕೆಯನ್ನು ನೀಡಿರುವುದಿಲ್ಲ. ಈಗ ತೋರಿಸಿದ ವಸ್ತುಗಳ ಮೇಲೆ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಾನು ಪೋಲೀಸರ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಸಾಕ್ಷಿಯು ಪಂಚನಾಮೆ ಗೆ ಹಾಗೂ ಹೇಳಿಕೆಯ ವ್ಯತಿರಿಕ್ತವಾಗಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲು ಮಾನ್ಯ ಎಪಿಪಿಯವರು ಕೋರಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀಸವಾಲು : ಶ್ರೀ. ಎ.ಪಿ.ಪಿ. ವಕೀಲರಿಂದ:**

ಸಾಕ್ಷಿಗೆ ದಿನಾಂಕ 10.11.2021 ರಂದು ಪೋಲೀಸರು ಘಟನಾ ನಡೆದ ಸ್ಥಳಕ್ಕೆ ಬಂದು ನನ್ನನ್ನು ಪಂಚರನ್ನಾಗುವಂತೆ ಕೇಳಿಕೊಂಡರು ಎಂದರೆ ಸರಿಯಲ್ಲ. ನಾನು ಸದರಿ ಪಂಚನಾಮೆಗೆ ಸಾಕ್ಷಿಯಾಗಿದ್ದು ನನ್ನ ಸಮಕ್ಷಮ ಮಧ್ಯಾಹ್ನ 3.30 ರಿಂದ 4.30 ರ ಸಮಯದಲ್ಲಿ ಪಂಚನಾವೆಯನ್ನು ಬರೆದು ನನಗೆ ಓದಿ ಹೇಳಿ ನಂತರ ನಾನು ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಆ ರೀತಿ ಹೇಳಿಕೆ ನೀಡಿಲ್ಲ ಎಂದು ಹಾಗೂ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಚಾಸಾ-1, 4, 5 ಮತ್ತು 6 ರವರು ದಾಳಿ ಮಾಡಿ ಆರೋಪಿತನ ವಶದಿಂದ 90 M.L. Haywards cheers Whisky ಯ 90 ಟೆಟ್ರಾ ಪ್ಯಾಕೆಟಗಳನ್ನು ಒಟ್ಟು ಸಾಮರ್ಥ್ಯದ 8 ಲೀ. 100 ಎಮ್. ಎಲ್ ಅದರ ಬೆಲೆ 3161 ರೂಗಳು ಇದ್ದು, ಸದರಿ ವಸ್ತುಗಳನ್ನು ಆರೋಪಿ ಸಂತೆಯಲ್ಲಿ ಮಾರಾಟ ಮಾಡಲು ಸಾಗಾಣಿಕೆಯನ್ನು ಮಾಡುತ್ತಿರುತ್ತಾನೆ ಎಂಬ ಹೇಳಿಕೆಯನ್ನು ನಾನು ಪೋಲೀಸರ ಸಮಕ್ಷಮ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಪಂಚನಾಮೆಯಡಿಯಲ್ಲಿ ಜಪ್ತಿಪಡಿಸಿ ರಸಾಯನಿಕ ಪರೀಕ್ಷೆಗೆ ತಲಾ ಒಂದೊಂದು ಬಾಟಲಿಯನ್ನು ಸೀಲ್ ಮಾಡಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 89 ಟೆಟ್ರಾ ಪ್ಯಾಕೆಟ್, ಒಂದು ಪ್ಲಾಸ್ಟಿಕ್ ಚೀಲ, 90 M.L. Haywards cheers Whisky ಎಮ್.ಎಲ್ ನ ಒಂದು ಟೆಟ್ರಾ ಪ್ಯಾಕೆಟ್ ಸ್ಯಾಂಪಲ್ ಅನ್ನು ವಶಪಡಿಸಿಕೊಂಡರು ಎಂಬ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪಂಚನಮೆಯನ್ನು ಚಾಸಾ-1, 4 ರಿಂದ 6 ರವರು ಸಹಿ ಮಾಡಿರುತ್ತಾರೆ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 10.11.2021 ರಂದು ಸಾಕ್ಷಿಯು ತನಿಖಾಧಿಕಾರಿಯವರಿಗೆ ನೀಡಿರುವ ಹೇಳಿಕೆಯನ್ನು ಯಥಾವತ್ತಾಗಿ ಓದಿ ಹೇಳಲಾಗಿ, ಸಾಕ್ಷಿಯು ಆ ರೀತಿ ಹೇಳಿಕೆ ನೀಡಿಲ್ಲ ಎಂದು ಹಾಗೂ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-**3 ಎಂದು ಗುರುತಿಸಲಾಯಿತು.**

ಪಾಟಿ ಸವಾಲು ಆರೋಪಿ ಪರ ವಕೀಲರಿಂದ

ನಾನು ಖಾಲಿ ಪೇಪರ್ ನ ಮೇಲೆ ಸಹಿ ಮಾಡಿದೆ

ಮರು ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ.ಸ. ಇದೆ

ಸಹಿ/-
ಹೆ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು